ಮುಖ್ಯ ಇಂಜಿನಿಯರ್‌ರವರ ಕಛೇರಿ,
ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ,
ಆನಂದರಾವ್ ವೃತ್ತ,
ಬೆಂಗಳೂರು - 560 009.

ಕಛೇರಿ : 080-22871094/22871174
Website : https://waterresources.karnataka.gov.in
ಇ-ಮೇಲ್ : bngwrdo@nic.in

# ಜಲ ಸಂಪನ್ಮೂಲ ಇಲಾಖೆ

ದಿನಾಂಕ 12 DEC 2022

## ಪ್ರಕಟಿಸಿರುವ ಪರಿಶೀಲನಾ ಪಟ್ಟಿಯ ಬಗ್ಗೆ ಹೆಚ್ಚುವರಿ ಮಾಹಿತಿ

ಜಲ ಸಂಪನ್ಮೂಲ ಇಲಾಖೆಯ ದ್ವಿತೀಯ ದರ್ಜೆ ಸಹಾಯಕ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಗಾಗಿ ಆನ್‌ಲೈನ್ ಮುಖಾಂತರ ಸ್ವೀಕರಿಸಲಾದ ಅರ್ಜಿಗಳಲ್ಲಿ ವಯೋಮಿತಿ ಹಾಗೂ ಶೈಕ್ಷಣಿಕ ವಿದ್ಯಾರ್ಹತೆಯ ಆಧಾರದ ಮೇಲೆ 29 ವರ್ಷದಿಂದ 40 ವರ್ಷ ವಯೋಮಿತಿಯುಳ್ಳ ಅಭ್ಯರ್ಥಿಗಳಲ್ಲಿ ಅಂಗವಿಕಲಚೇತನ ಅಭ್ಯರ್ಥಿಗಳ 1:3 ಅನುಪಾತ ಹಾಗೂ ಇನ್ನಿತರ ಪ್ರವರ್ಗದ ಅಭ್ಯರ್ಥಿಗಳ 1:2 ಅನುಪಾತದ ಪಟ್ಟಿಯನ್ನು ತಯಾರಿಸಿ, ದಿನಾಂಕ: 05/12/2022ರಂದು ಜಲ ಸಂಪನ್ಮೂಲ ಇಲಾಖೆಯ ವೆಬ್‌ಸೈಟ್‌ನಲ್ಲಿ ಮೂಲ ದಾಖಲೆಗಳ ಪರಿಶೀಲನೆಗಾಗಿ ಪರಿಶೀಲನಾ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

I. ಅಭ್ಯರ್ಥಿಗಳ ಅಂಕಗಳ ಆಧಾರದ ಮೇಲೆ ವಿವಿಧ ವರ್ಗಗಳ ಮೀಸಲಾತಿವಾರು ಕಟ್‌ಆಫ್ ಈ ಕೆಳಗಿನಂತಿದೆ (29 ವರ್ಷದಿಂದ 40 ವರ್ಷ ವಯೋಮಿತಿಯುಳ್ಳ ಅಭ್ಯರ್ಥಿಗಳು):

| ಮೀಸಲಾತಿ ಪ್ರವರ್ಗ | ಉಪವರ್ಗ | ಕಟ್‌ಆಫ್ % |
|---|---|---|
| 1) ಇತರೆ | - | 92.71 |
| 2) ಮಹಿಳೆ | - | 86.00 |
| 3) ಗ್ರಾಮೀಣ | - | 93.00 |
| 4) ಮಾಜಿ ಸೈನಿಕ | - | 68.77 |
| 5) ಕ.ಮಾ.ಅ. | - | 94.67 |
| 6) ಅಂಗವಿಕಲತೆ | ಅ) ಕುರುಡುತನ ಉಳ್ಳವರಿಗೆ/ಕಡಿಮೆ ಮಂದ ದೃಷ್ಟಿ ಉಳ್ಳವರಿಗೆ | 82.33 |
| | ಆ) ಕಿವುಡುತನ ಉಳ್ಳವರಿಗೆ/ಮಂದ ಶ್ರವಣ ದೋಷ ಉಳ್ಳವರಿಗೆ | 82.43 |
| | ಇ) ಒಂದು ತೋಳು ಇಲ್ಲದವರಿಗೆ/ ಒಂದು ಕಾಲು ಇಲ್ಲದವರಿಗೆ/ಕುಷ್ಠರೋಗದಿಂದ ಗುಣಮುಖರಾದವರಿಗೆ/ ಎರಡು ಕಾಲು/ಎರಡು ತೋಳು/ಒಂದು ತೋಳು/ಒಂದು ಕಾಲು/ ಮಿದುಳು ನಾಡಿ ದೋಷ/ಕುಬ್ಜತೆ/ಆಸಿಡ್ ಧಾಳಿ ಸಂತ್ರಸ್ತರು/ ಸ್ನಾಯುಕ್ಷಯ | 85.43 |
| | ಈ) ಸ್ವಲೀನತೆ ಸ್ಪೆಕ್ಟ್ರಮ್ ಅಸ್ವಸ್ಥತೆ (ಸೌಮ್ಯ) ಉಳ್ಳವರಿಗೆ/ನಿರ್ದಿಷ್ಟ ಕಲಿಕೆಯ ಅಸಮರ್ಥ್ಯತೆ/ಮಾನಸಿಕ ಅಸ್ವಸ್ಥತೆ<br>ಉ) ಮೇಲಿನ 'ಅ' ರಿಂದ 'ಈ' ವರೆಗೆ ಒಳಗೊಂಡಂತೆ ಬಹುವಿಧ ಅಂಗ ವೈಕಲ್ಯ | 72.14 |
| 7) ಯೋಜನಾ ನಿರಾಶ್ರಿತ ಅಭ್ಯರ್ಥಿ | - | 90.85 |

**II.** ಪ್ರಕಟಗೊಳಿಸಲಾದ ಪರಿಶೀಲನಾ ಪಟ್ಟಿಯ ಕುರಿತು ಹಲವಾರು ಪ್ರಶ್ನೆಗಳನ್ನು ದೂರವಾಣಿ ಹಾಗೂ ಇ-ಮೇಲ್ ಮುಖಾಂತರ ಈ ಕಚೇರಿಗೆ ಕೇಳಲಾಗುತ್ತಿದೆ. ಈ ಕುರಿತು ಕೆಳಗಿನಂತೆ ಸ್ಪಷ್ಟೀಕರಣವನ್ನು ನೀಡಲಾಗಿದೆ.

| | ಆಕ್ಷೇಪಣೆಗಳು | | ಉತ್ತರಗಳು |
|---|---|---|---|
| 1. | ಕೆಲವೊಂದು ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಅರ್ಜಿಯನ್ನು ಸಲ್ಲಿಸಿರುವ ಬಗ್ಗೆ. | - | ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಅರ್ಜಿಗಳನ್ನು ಸಲ್ಲಿಸಿದ ಸಂದರ್ಭದಲ್ಲಿ ಎಲ್ಲಾ ಮೂಲ ದಾಖಲಾತಿಗಳನ್ನು ಪರಿಶೀಲನಾ ಸಮಯದಲ್ಲಿ ಪರಿಶೀಲಿಸಿ, ಅರ್ಹ ಒಂದು ಅರ್ಜಿಯನ್ನು ಮಾತ್ರ ಪರಿಗಣಿಸಲಾಗುವುದು. |
| 2. | ಕೆಲವೊಂದು ಅಭ್ಯರ್ಥಿಗಳು 100% ಅಂಕಗಳಿಸಿರುವ ಬಗ್ಗೆ ಸಂಶಯ ವ್ಯಕ್ತಪಡಿಸಲಾಗಿದೆ. | - | ಅಭ್ಯರ್ಥಿಗಳ ಅಂಕಪಟ್ಟಿಯ ಪರಿಶೀಲನಾ ಸಂದರ್ಭದಲ್ಲಿ ಈ ವಿಷಯವನ್ನು ಪರಿಶೀಲಿಸಲಾಗುವುದು ಹಾಗೂ ಪರಿಶೀಲನಾ ಸಂಧರ್ಭದಲ್ಲಿ ಅಭ್ಯರ್ಥಿಯು ಹಾಜರುಪಡಿಸುವ ಅಂಕಪಟ್ಟಿಯ ನೈಜತೆಯನ್ನು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪರಿಶೀಲನೆಗೆ ಒಳಪಡಿಸಲಾಗುವುದು. |
| 3. | ಎರಡು ವರ್ಷಗಳ ಐ.ಟಿ.ಐ. ಕೋರ್ಸ್ ಅಥವಾ ಎರಡು ವರ್ಷಗಳ ವೃತ್ತಿ ಶಿಕ್ಷಣ ಡಿಪ್ಲೊಮೊ (ಜೆ.ಓ.ಸಿ./ಜೆ.ಓ.ಡಿ.ಸಿ./ಜೆ.ಎಲ್.ಡಿ.ಸಿ.)ಗಳನ್ನು ಪಿ.ಯು.ಸಿ.ಗೆ ತತ್ಸಮಾನವೆಂದು ಪರಿಗಣಿಸಿರುವ ಬಗ್ಗೆ. | - | ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 81 ಸೇವನೆ 2017 ದಿನಾಂಕ: 27/02/2018 ಹಾಗೂ ಜಲ ಸಂಪನ್ಮೂಲ ಇಲಾಖೆಯ ಅಧಿಸೂಚನೆ ಸಂಖ್ಯೆ: 205/ಇಎಸ್‌ಎಂ/ದ್ವಿದಸ/ಬ್ಯಾಕ್‌ಲಾಗ್/2021 ದಿನಾಂಕ: 23/09/2022 ಮತ್ತು 21/10/2022 ರನ್ವಯ ಎರಡು ವರ್ಷಗಳ ಐ.ಟಿ.ಐ. ಕೋರ್ಸ್ ಅಥವಾ ಎರಡು ವರ್ಷಗಳ ವೃತ್ತಿ ಶಿಕ್ಷಣ ಡಿಪ್ಲೊಮೊ (ಜೆ.ಓ.ಸಿ./ಜೆ.ಓ.ಡಿ.ಸಿ./ಜೆ.ಎಲ್.ಡಿ.ಸಿ.) ಅಭ್ಯರ್ಥಿಗಳು ಎನ್.ಐ.ಒ.ಎಸ್.ನ ವತಿಯಿಂದ ನಡೆಸುವ ಒಂದು ಭಾಷಾ ಕೋರ್ಸ್ ಮತ್ತು ಒಂದು ಶೈಕ್ಷಣಿಕ ವಿಷಯದಲ್ಲಿ (ದೂರಕಲಿಕೆ ಮಾದರಿಯಲ್ಲಿ) ಅಥವಾ ಪದವಿ ಪೂರ್ವ ಮಂಡಳಿಯು ನಡೆಸುವ ಪರೀಕ್ಷೆಯಲ್ಲಿ ಒಂದು ಭಾಷೆ ಮತ್ತು ಒಂದು ವಿಷಯದಲ್ಲಿ ಉತ್ತೀರ್ಣರಾದಲ್ಲಿ ಮಾತ್ರ ಪಿ.ಯು.ಸಿ.ಗೆ ತತ್ಸಮಾನವೆಂದು ಪರಿಗಣಿಸಲಾಗುವುದು. |
| 4. | ಸುಳ್ಳು ಮಾಹಿತಿಯನ್ನು ನೀಡಿದವರ ಬಗ್ಗೆ. | - | ಮೂಲ ದಾಖಲೆಯ ಪರಿಶೀಲನೆಯ ಸಮಯದಲ್ಲಿ ಅಧಿಸೂಚನೆಯಲ್ಲಿ ಪ್ರಕಟಿಸಿರುವಂತೆ ಸೂಕ್ತ ಕ್ರಮಕೈಗೊಳ್ಳಲಾಗುವುದು. |
| 5. | 18 ವರ್ಷದಿಂದ 28 ವರ್ಷಗಳ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸದೇ ಇರುವ ಬಗ್ಗೆ. | | ಜಲ ಸಂಪನ್ಮೂಲ ಇಲಾಖೆಯ ಅಧಿಸೂಚನೆ ಸಂಖ್ಯೆ: 205/ಇಎಸ್‌ಎಂ/ದ್ವಿದಸ/ಬ್ಯಾಕ್‌ಲಾಗ್/2021 ದಿನಾಂಕ: 23/09/2022 ಮತ್ತು 21/10/2022ರಲ್ಲಿ ತಿಳಿಸಿರುವಂತೆ 29 ವರ್ಷದಿಂದ 40 ವರ್ಷ ವಯೋಮಿತಿಯುಳ್ಳ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಮಾತ್ರ 18 ವರ್ಷದಿಂದ 28 ವರ್ಷಗಳ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗುವುದು. |

ಸಹಿ/-
ಮುಖ್ಯ ಇಂಜಿನಿಯರ್,
ಜ.ಸಂ.ಅ.ಸಂಸ್ಥೆ, ಬೆಂಗಳೂರು.